ಗದಗಿನಲ್ಲಿ ಸಣ್ಣ ಹುದ್ದಿಮೆಗಳಿಗಾಗಿ ಮೀಸಲಾಗಿದ್ದ ಕೈಗಾರಿಕಾ ವಸಾಹತುವಿನ ವಿಸ್ತೀರ್ಣದ ಬಗ್ಗೆ

೮೪ (೨೬೬) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಗದುಗಿನಲ್ಲಿ ಸಣ್ಣ ಉದ್ದಿಮೆಗಳಿಗಾಗಿ ಮೀಸಲಾಗಿದ್ದ ಕೈಗಾರಿಕಾ ವಸಾಹತುವಿನ ವಿಸ್ತೀರ್ಣ ವೆಷ್ಟು ಹಾಗೂ ಅದರಲ್ಲಿ ಎಷ್ಟು ಪ್ಲಾಟುಗಳನ್ನು ಮಾಡಲಾಗಿದೆ ?

ಆ) ಈ ಪ್ಲಾಟುಗಳಲ್ಲಿ ನಿರ್ಮಾಣಗೊಂಡ ಶೆಡ್ಡುಗಳೆಷ್ಟು ಹಾಗೂ ಅದಕ್ಕೆ ತಗುಲಿದ ವೆಚ್ಚವೆಷ್ಟು ?

ಇ) ಈ ಶೆಡ್ಡುಗಳನ್ನಾಗಲೀ ಇಲ್ಲವೇ ಜಮೀನನ್ನಾಗಲೀ ಯಾರು ಯಾರಿಗೆ ಕೊಟ್ಟಿದ್ದೀರಿ, ಅದರಲ್ಲಿ ಗದುಗಿನವರೆಷ್ಟು ಮತ್ತು ಹೊರಗಿನವರೆಷ್ಟು ?

ಈ) ಗದುಗಿನ ಉದ್ದಿಮೆ ಮಾಡಬಯಸುವ ಯುವಕರಿಂದ ಮನವಿಗಳು ಬಂದರೂ ಸಹಾ ಇವು ಇತ್ಯರ್ಥ ಆಗದೆ ಉಳಿದಿರುವುದೆ. ಅವರಿಗೆ ಜಮೀನು ಪೂರೈಸಿ ಕೊಡಲು ಯಾವ ಕ್ರಮ ಕೈಗೊಳ್ಳಲಾಗಿದೆ ?

ಉ) ಈ ವಸಾಹತುಗಳಲ್ಲಿರುವ ಸ್ಥಳವನ್ನಾಗಲೀ ಆಥವಾ ಕಟ್ಟಡಗಳನ್ನಾಗಲೀ ಜನರಿಗೆ ಕೊಡುವಾಗ ಜಾಹಿರಾತು ಕೊಡದೆ ಯಾವುದಾದರೂ ನಿರ್ದೇಶನಗಳನ್ನು ಕೊಡಲಾಗಿದೆಯೇ ಹಾಗೆ ಕೊಟ್ಟಿದ್ದರೆ ಅದರಲ್ಲಿ ಅಡಕವಾಗಿರುವ ಉದ್ದೇಶವೇನು ಇದರಿಂದ ನಿಜವಾದ ಉದ್ದಿಮೆದಾರರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೆ ? ಈಗಲಾದರೂ ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಜೆ. ಹೆಚ್. ಪಟೀಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಗದುಗಿನ ವಸಾಹತುವಿನ ವಿಸ್ತೀರ್ಣ ೧೧ ಎಕರೆ ೩೭ ಗುಂಟೆ ಇದರಲ್ಲಿ ೧೨ ಕೈಗಾರಿಕಾ ಮಳಿಗೆಗಳನ್ನು ಕಟ್ಟಿದೆ ಮತ್ತು ೨೧ ನಿವೇಶನಗಳನ್ನು ಮಾಡಲಾಗಿದೆ. ಮಿಕ್ಕ ಜಾಗ ಖಾಲಿ ಇದೆ.

ಆ) ೧೨ ಶೆಡ್ಡುಗಳನ್ನು ಕಟ್ಟಲಾಗಿದೆ. ಅದಕ್ಕೆ ತಗಲುವ ವೆಚ್ಚ ರೂ. ೪,೭೭,೪೦೪–೦೦.

ಇ) ಈ ಬಗ್ಗೆ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸಿರುವ ಪಟ್ಟಿಯಲ್ಲಿ ಕೊಟ್ಟಿದೆ.

ಈ) ಇತ್ಯರ್ಥವಾಗದೇ ಉಳಿದಿರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತಿದೆ.

ಉ) ಹೌದು, ೧೯೮೨ನೇ ಇಸವಿಯಲ್ಲಿ ಜಿಲ್ಲಾ ಮಟ್ಟದ ವಿತರಣಾ ಸಮಿತಿಯು ರಚನೆಯಾಗುವ ಮುಂಚೆ ಶೆಡ್ಡು ಆಥವಾ ಪ್ಲಾಟುಗಳನ್ನು ರಾಜ್ಯಮಟ್ಟದ ವಿತರಣಾ ಸಮಿತಿಯಲ್ಲಿ ವಿತರಣೆ ಮಾಡಲು ಕಾಲಾನುಕಾಲಕ್ಕೆ ಜಾಹಿರಾತು ಕೊಡಲಾಗಿತ್ತು. ೧೯೮೨ನೇ ಇಸವಿಯಿ ನಂತರವೂ ಶೆಡ್ಡುಗಳ ವಿತರಣೆಯನ್ನು ಜಾಹಿರಾತು ಕೊಡುವುದರ ಮೂಲಕವೇ ಮಾಡಲಾಗಿದೆ. ನಂತರ ಕೆಲವು ಅರ್ಜಿಗಳನ್ನು ಯೋಜನಾ ವರದಿಯ ತಾಂತ್ರಿಕ ಸಂಭಾವ್ಯತೆ ಮತ್ತು ಆರ್ಥಿಕ ಸೂಕ್ತತೆ ಸಿಂಗಲ್ ವಿಂಡೋ ಎಜನ್ಸಿ ಶಿಫಾರಸ್ಸಿನ ಮೇರೆಗೆ ಹಾಗೂ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ ಮಂಡಳಿಯು ನಿಗದಿಪಡಿಸಿದ ನಿಯಮಾವಳಿಗಳ ಅನುಗುಣವಾಗಿ ಪ್ಲಾಟುಗಳನ್ನು ವಿತರಣೆ ಮಾಡಲಾಗಿದೆ.

ಗದುಗಿನ ಕೈಗಾರಿಕಾ ಪ್ರಸಾಪತುವಿನಲ್ಲಿನ ಶೆಡ್ಡುಗಳ ವಿತರಣೆಯ ವಿವರಗಳು

ಕ್ರಮ ಸಂಖ್ಯೆ	ಉದ್ದಿಮೆಯ ಹೆಸರು ಮತ್ತು ವಿಳಾಸ	ಶೆಡ್ಡಿನ ಸಂಖ್ಯೆ	ಗದುಗಿನವರೇ ಆಥವಾ ಹೊರಗಿನವರೇ (ಇರುವ ಮಾಹಿತಿಗಳ ಆಧಾರದ ಮೇಲೆ)
೧)	ಶ್ರೀಮತಿ ರತ್ನಾ ಸೌನ್ಸಿಕರ್, ಮೆ॥ ಪದ್ಮಾ ಕೆಮಿಕಲ್ಸ್, ಮಹಾಶಬ್ದೆ ಬಿಲ್ಡಿಂಗ್ ಎಕ್ಸ್‌ಟೆನ್‌ಷನ್ ಗದಗ.	ಎಂ–೧	ಗದಗ್‌ನವರು
೨)	ಶ್ರೀ ಬಿ. ವೈ. ಅರಹುಣಸಿ, ಮೆ॥ ರೇಣುಕಾ ಡಿಟರ್ಜೆಂಟ್ಸ್ ವಕೀಲ್ ಚಾಲ್, ಗದಗ	ಎಂ–೨	ಸವದಿ, ರೋಣ ತಾಲ್ಲೂಕು ಧಾರವಾಡ ಜಿಲ್ಲೆ
೩)	ಶ್ರೀ ಬಸವಂತಪ್ಪ ಎಸ್. ಮುತ್ತಿಕರ್ ಮೆ॥ ಎಂ. ಎಸ್. ಇಂಜಿನಿಯರಿಂಗ್ ಕೇರಾಫ್ ಪಿ.ಎಲ್. ಮೇಹರ್‌ವಾಡೆ ಲಮರ್ ಭವಾಗುಡಿ, ಬೆಟಗೇರಿ	ಎಂ–೩ ಮತ್ತು ೬	ಹುಬ್ಬಳ್ಳಿ
೪)	ಶ್ರೀ ಮೃತ್ಯುಂಜಯ ವೀರಯ್ಯ ತೊಟ್ ಗಂಡಿಮಠ ಮೆ॥ ಸ್ಟಾರ್ ಇಂಜಿನಿಯರಿಂಗ್ ನಂ. ೨೫೬, ಷಾಹಪೂರ್ ಪೇಟ್, ಗದಗ	ಎಂ–೪ ಮತ್ತು ೫	ಗದಗನವರು
೫)	ಶ್ರೀ ಪಿ. ಎಂ. ಮುಳುಗುಂಡ ಮಠ ಮೆ॥ ಶಿವಶಕ್ತಿ ಇಂಡಸ್ಟ್ರೀಸ್, ಹೆಲ್ಸ್ ಕ್ಯಾಂಪ್, ಗದಗ	ಸಿ–೭ ಮತ್ತು ೮	ನಾರಾಯಣಪುರ ಗ್ರಾಮ ಗದಗ್ ತಾಲ್ಲೂಕು
೬)	ಶ್ರೀ ಎ. ಮಹಮದ್ ಅಪ್ಸರ್, ಮೆ॥ ಸದಾಪ್ ರಬ್ಬರ್ ಇಂಡಸ್ಟ್ರೀಸ್ ನಂ. ೧೨೪ ಬಿ ೩ ಬಸವೇಶ್ವರ ರೋಡ್, ಗದಗ	ಡಿ–೯	ಗದಗ್‌ನವರು
೭)	ಶ್ರೀ ಎ .ಎಂ. ಜೋಷಿ, ಮೆ॥ ಮಹದೇವ್ ಇಂಡಸ್ಟ್ರೀಸ್, ವಕೀಲ್ ಚಾಲ್ ಗದಗ	ಡಿ–೧೦	ಯಾವಗಲ್ ರೋಡ್ ತಾಲ್ಲೂಕು, ಧಾರವಾಡ ಜಿಲ್ಲೆ.
೮)	ಶ್ರೀ ಜಿ. ದಿವಕರ್ ನೀಲಕಂಠಪ್ಪ ಜಾದ್‌ಗೌಡರ್, ಮೆ॥ ಅನಿಲ್ ಎಂಟರ್‌ಪ್ರೈಸಸ್, ತೊಂಟದಾರಿಯ ಮಠದ ಹತ್ತಿರ, ಗದಗ	ಡಿ–೧೧	ಬೆಟಗೇರಿ ಗದಗ
೯)	ಶ್ರೀ ರಾಮಚಂದ್ರ ಪುರುಶೋತ್ತಮ ಗೊಂಡಕರ್, ಮೆ॥ ದುರ್ಗಾ ಪ್ಲಾಸ್ಟಿಕ್ ಇಂಡಸ್ಟ್ರೀಸ್, ಹೆಲ್ತ್ ಕ್ಯಾಂಪ್ ಬೆಟಗೇರಿ, ಗದಗ	ಡಿ–೧೨	ಗದಗ ಬೆಟಗೇರಿ

ಗದುಗಿನ ಕೈಗಾರಿಕಾ ವಸಾಹತುವಿನಲ್ಲಿರುವ ಪ್ಲಾಟುಗಳ ಪತರಣಿ ವಿವರಗಳು

೧)	ಶ್ರೀ ಶಂಕರಯ್ಯ ಗುರುಸಿದ್ದಪ್ಪ ಬಾಗೇವಾಡಿ ಮೆ॥ ಬಾಗೇವಾಡಿ ಮಠದಾಲ ಇಂಡಸ್ಟ್ರೀಸ್ ಕೆರಾಫ್ ಎಸ್.ಜಿ. ಬಾಗೇವಾಡಿ ಮಠ ಗ್ರೈನ್ ಮಾರ್ಕೆಟ್ ಗದಗ	ಎಂ–೧	ಗದಗ್‌ನಪರು
೨)	ಶ್ರೀ ಸಿ. ಎಸ್. ಹಿರೇಮಠ ಮೆ॥ ಸರ್ವಮಂಗಳ ದಾಲ್ ಇಂಡಸ್ಟ್ರೀಸ್ ರಾಜೋತೇಶ್ವರ ಗುಡಿ ಗದಗ	ಎಂ–೨	–,,–
೩)	ಶ್ರೀ ಎಸ್. ಎ. ಹೊಸಮನಿ ಮೆ॥ ವಿಮಲಾ ಆಯಿಲ್ ಇಂಡಿಸ್ಟ್ರೀಸ್ ಆಜಾದ್ ರೋಡ್, ಗದಗ	ಎಂ–೩	–,,–
೪)	ಶ್ರೀ ಎಂ. ಗಂಗಾಧರಪ್ಪ ಮೆ॥ ಜಿ.ಕೆ. ಇಂಡಸ್ಟ್ರೀಸ್ ಕೆ.ಬಿ. ಹಾಡೆಗಲ್ ಕೆರಾಫ್ ಎಸ್.ಪಿ. ಮಟ್ಟಿ ಬೇಟಗೇರಿ ಹೆಲ್ತ್ ಕ್ಯಾಂಪ್, ಗದಗ	ಎಂ–೪	–,,–
೫)	ಶ್ರೀ ಸಂಗಪ್ಪ ವೀರಪ್ಪ ಮೆ॥ ಎಸ್. ವಿ. ಗದಗ ಅಂಡ್ ಕಂಪನಿ ಎಕ್ಸ್‌ಟೆನ್‌ಷನ್ ಕೊ ಬಾಕ್ಸ್ ನಂ. ೭೬, ಗದಗ	ಎಂ–೫ ಮತ್ತು ೬	–,,–
೬)	ಶ್ರೀ ಪಿ. ಎ. ಜೋಷಿ ಮೆ॥ ನೀತಾ ಪ್ರಿಸಿಷನ್ ಬಟ್ ಬಂಗಲೆ ಷಾಹಾಪಟ್‌ಪುರ, ಗದಗ	ಎಂ–೮	–,,–
೭)	ಶ್ರೀ ಸದಾನಂದ ಸಿ. ಯಾವಗಿರಿ ಮೆ॥ ಬಣವೇಶ್ವರ ಇಂಡಸ್ಟ್ರೀಸ್, ನಂ. ೬ ಬಣವೇಶ್ವರ ಕೃಪಾ ಮನ್ಸೂರಿ ಎಕ್ಸ್‌ಟೆನ್‌ಷನ್ ಗದಗ	ಎಂ–೯	–,,–
೮)	ಶ್ರೀ ಜಿ. ಎನ್. ಬಾಕಳೆ ಜವಳಿ ಬಜಾರ್ ಸಿ.ಬಿ. ಪೋಸ್ಟ್ ಆಫೀಸ್ ಬಳಿ, ಗದಗ	ಎಂ–೧೦	–,,–
೯)	ಶ್ರೀ ವೈ.ಸಿ. ಆಂಗಡಿ, ಪ್ಲೋರ್ ಮಿಲ್ಸ್, ವಿರನಾರಾಯಣ ರಸ್ತೆ, ಗದಗ	ಎಂ–೧೧	–,,–
೧೦)	ಶ್ರೀ ವೆಂಕಟೇಶ್ ಮೆ॥ ವೆಂಕಟೇಶ್ ಮೆಟಲ್ ಇಂಡಸ್ಟ್ರೀಸ್, ಬಸವೇಶ್ವರ ರೋಡ್, ಗದಗ	ಎಂ–೧೨	–,,–
೧೧)	ಶ್ರೀ ಟುಂಡ್ರುಪ್ಪ ಬಸವಲಿಂಗಪ್ಪ ಕಮ್ಮಾರ್, ಮೆ॥ ಶಿವ ಸ್ಟೀಲ್ ಇಂಡಸ್ಟ್ರೀಸ್, ಬಸವೇಶ್ವರ ರೋಡ್, ಗದಗ	ಎಲ್–೨	–,,–
೧೨)	ಶ್ರೀ ರಮೇಶ್ ಎಂ. ಗುಡಿ, ಮೆ॥ ಪರಿಮಳ ಇಂಡಸ್ಟ್ರೀಸ್ ಕೇರಾಫ್ ಎಂ. ಗುಡಿ, ವೀರನಾರಾಯಣ ಗುಡಿ ಹತ್ತಿರ, ಗದಗ	ಎಲ್–೫	–,,–

ಅಧ್ಯಕ್ಷರು.—ಶ್ರೀ ಕೆ.ಹೆಚ್. ಪಾಟೀಲ್‌ರವರ ಪರವಾಗಿ ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು ಪ್ರಶ್ನೆ ಕೇಳುತ್ತಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇತ್ಯರ್ಥವಾಗದೇ ಉಳಿದಿರುವ ಅರ್ಜಿಗಳನ್ನು ಪರಿಶೀಲಿಸಲಾಗುವುದು ಎಂದು ಹೇಳಿದ್ದೀರಿ. ಮುಖ್ಯವಾಗಿ ಈ ಪ್ರಶ್ನೆಯು ತಾತ್ಪರ್ಯವೇ ಅದು. ಯಾದುಗಿನವರೇ ಆಗಿರತಕ್ಕ ಹಲವಾರು ಜನ ಯುವಕರು ಅಲ್ಲಿ ಕೈಗಾರಿಕೆ ಮಾಡುವುದಕ್ಕೆ ಜಾಗ ಬೇಕೆಂದು ಅರ್ಜಿಯನ್ನು ಕೊಟ್ಟಿದ್ದಾರೆ. ಆ ಅರ್ಜಿಗಳನ್ನು ಪರಿಶೀಲನೆ ಮಾಡದೆ ಉಳಿದಿರುವುದರಿಂದ ಇರುತ್ತಾಬಾ ವಿಳಂಬವಾಗಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಈ ರೀತಿ ಇರುವ ಅರ್ಜಿಗಳು ಎಷ್ಟು? ಅವುಗಳನ್ನು ಎಷ್ಟು ಕಾಲದ ಮಿತಿಯಲ್ಲಿ ಪರಿಶೀಲನೆ ಮಾಡಿ ಆದಷ್ಟು ಹೆಚ್ಚು ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಿ ?

ಶ್ರೀ ಜೆ.ಹೆಚ್. ಪಟೇಲ್.—ಅರ್ಜಿಗಳು ಎಷ್ಟು ಇವೆ ಎಂಬುದರ ವಿವರ ಈಗ ನನ್ನಲ್ಲಿಲ್ಲ. ಅವುಗಳ ವಿವರಗಳನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ. ಮಾನ್ಯ ಸದಸ್ಯರು ಸ್ಥಳೀಯರಿಗೆ ಆದ್ಯತೆಯನ್ನು ಕೊಡಬೇಕೆಂಬ ಸಲಹೆಯನ್ನು ಏನು ಕೊಟ್ಟಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಆ ಪ್ರಕಾರವಾಗಿ ಅರ್ಜಿಗಳನ್ನು ವಿಲೇವಾರಿ ಮಾಡುವಾಗ ಸ್ಥಳೀಯರಿಗೆ ಆದ್ಯತೆಯನ್ನು ಕೊಡಬೇಕೆಂಬ ಆದೇಶವನ್ನು ನೀಡುತ್ತೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಆ ರೀತಿಯಾದ ಸೂಚನೆಯನ್ನು ಕೊಟ್ಟು ಸ್ಥಳೀಯ ಯುವಕರ ಅರ್ಜಿಗಳು ಏನು ಬಹಳ ಕಾಲದಿಂದ ಉಳಿದಿವೆ ಆದಷ್ಟು ಬೇಗನೆ ಆ ಅರ್ಜಿಗಳನ್ನು ಇತ್ಯರ್ಥಗೊಳಿಸಬೇಕೆಂದು ಸೂಚನೆಯನ್ನು ತಕ್ಷಣವೇ ಕಳುಹಿಸಿಕೊಡುತ್ತೀರಾ?

ಶ್ರೀ ಜೆ. ಹೆಚ್. ಪಟೇಲ್.—ಆಗಬಹುದು.

ಕೃತಕ ಗರ್ಭಧಾರಣ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದು

೬೫ (೧೯೬) ಶ್ರೀ ಕೆ.ಬಿ. ಕೋಳಿವಾಡ್ (ರಾಣಿಬೆನ್ನೂರು).—ಮಾನ್ಯ ರೇಷ್ಮೆ, ಕೃಷಿ, ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಣಿಬೆನ್ನೂರು ತಾಲ್ಲೂಕು ಗುಡಗೂರು ಗ್ರಾಮದ ಕೃತಕ ಗರ್ಭಧಾರಣ ಕೇಂದ್ರವನ್ನು ಅಭಿವೃದ್ಧಿಗೊಳಿಸಿ ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರದವರಿಗೆ ಮನವಿಗಳೇನಾದರೂ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಈ ಕೇಂದ್ರವನ್ನು ಯಾವಾಗ ಮೇಲ್ದರ್ಜೆಗೇರಿಸಲಾಗುವುದು?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ವೀನುಗಾರಿಕೆ ಸಚಿವರು).—

ಅ) ಹೌದು.

ಆ) ಪರಿಶೀಲಿಸಲಾಗುವುದು.

ಶ್ರೀ ಕೆ.ಬಿ. ಕೋಳಿವಾಡ್.—ರಾಣಿಬೆನ್ನೂರು ತಾಲ್ಲೂಕಿನ ಉತ್ತರ ಭಾಗದ ಈ ಕೃತಕ ಗರ್ಭಧಾರಣ ಕೇಂದ್ರವು ಆಸ್ಪತ್ರೆ ಏನು ಇದೆ ಅದನ್ನು ಮೇಲ್ದರ್ಜೆಗೆ ಏರಿಸಬೇಕು. ಕಾರಣ ಆ ಪ್ರದೇಶದಲ್ಲಿ ಜಾನುವಾರುಗಳ ಸಂಖ್ಯೆ ವಿಪರೀತ ಬೆಳೆಯುತ್ತಿದೆ. ಅದನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ ಪರಿಶೀಲನೆ ನಡೆಯುತ್ತಿದೆ ಎಂಬುದಾಗಿ ಹೇಳಿದ್ದೀರಿ. ಯಾವಾಗ ಮೇಲ್ದರ್ಜೆಗೆ ಏರಿಸುತ್ತೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ.—ಅಲ್ಲಿ ಹಾಲಿ ಇರತಕ್ಕಂತಹ ಕೃತಕ ಗರ್ಭಧಾರಣಾ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸುವಂತಹ ಕಾರ್ಯಕ್ರಮವನ್ನು ಪಂಚ ಸೂತ್ರವಾಗಿ ತೆಗೆದುಕೊಳ್ಳಬೇಕಾಗುತ್ತದೆ, ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿರುವುದರಿಂದ ಕಾದು ನೋಡಬೇಕೆಂದು ಇಲಾಖೆಯ ನಿರ್ದೇಶಕರಿಗೆ ಈಗಾಗಲೇ ಕೋರಲಾಗಿದೆ. ಅವರಿಂದ ವರದಿ ಬಂದ ಮೇಲೆ ಆ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.